Fax: 08282-256262
E-mail:kuvempuacademic@gmail.com

Phone No - 08282-256149
Website :www.kuvempu.ac.in

ಕುವೆಂಪು ವಿಶ್ವವಿದ್ಯಾಲಯ

ಶೈಕ್ಷಣಿಕ ವಿಭಾಗ, ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ,
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.

**Re-Accredited by NAAC with "A" Grade, Ranked 73rd place in NIRF-2019 & 45th Place at National Level in SCIMAGO Rankings**

ಸಂಖ್ಯೆ:ಕುವಿ:ಶೈವಿ:ಎಸಿ-6: 664 :2023-24 ದಿನಾಂಕ:24-05-2023

# ಅಧಿಸೂಚನೆ

**ವಿಷಯ:- 2023-24ನೇ ಶೈಕ್ಷಣಿಕ ಸಾಲಿಗೆ ಸ್ನಾತಕ ಪದವಿಗಳಿಗೆ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಅನುಸಾರ ಯು.ಯು.ಸಿ.ಎಂ.ಎಸ್ ಮೂಲಕ ಆನ್‌ಲೈನ್‌ನಲ್ಲಿ ಪ್ರವೇಶಾತಿ ಅರ್ಜಿ ಸಲ್ಲಿಸುವ ಬಗ್ಗೆ.**

**ಉಲ್ಲೇಖ:-** 1. ಸರ್ಕಾರದ ಆದೇಶ ಸಂಖ್ಯೆ: ಇಡಿ 80 ಯುಎನ್‌ಇ 2023, ಬೆಂಗಳೂರು, ದಿನಾಂಕ:23-05-2023.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 260 ಯುಎನ್‌ಇ 2019 (ಭಾಗ-1), ಬೆಂಗಳೂರು, ದಿನಾಂಕ:07-08-2021.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:24-05-2023.

*****

2023-24ನೇ ಶೈಕ್ಷಣಿಕ ಸಾಲಿನ ಸ್ನಾತಕ ಪ್ರವೇಶಾತಿ ಕುರಿತು ಉಲ್ಲೇಖ(1)ರ ಸರ್ಕಾರದ ಮಾರ್ಗಸೂಚಿ ಆದೇಶದನ್ವಯ ಬಿ.ಎ. / ಬಿ.ಎಸ್ಸಿ. / ಬಿ.ಕಾಂ. / ಬಿ.ಬಿ.ಎ. / ಬಿ.ಬಿ.ಎ. (ಟೂರಿಸಂ ಅಂಡ್ ಟ್ರಾವೆಲ್ಸ್) / ಬಿ.ಎಸ್.ಡಬ್ಲ್ಯೂ. ವಿವಿಧ ಸ್ನಾತಕ ಪದವಿಗಳಿಗೆ ಯು.ಯು.ಸಿ.ಎಂ.ಎಸ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ದಿನಾಂಕಗಳನ್ನು ಈ ಕೆಳಕಂಡಂತೆ ನಿಗಧಿಪಡಿಸಲಾಗಿದೆ.

**2023-24ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಗಳ ಪ್ರಥಮ ವರ್ಷದ ಪ್ರಥಮ ಸೆಮಿಸ್ಟರ್ ಪ್ರವೇಶಾತಿಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.**

| | | |
|---|---|---|
| 01 | ಯು.ಯು.ಸಿ.ಎಂ.ಎಸ್ ಪೋರ್ಟಲ್‌ನಲ್ಲಿ ಪ್ರಥಮ ವರ್ಷದ ಪ್ರಥಮ ಸೆಮಿಸ್ಟರ್ ಪದವಿಗೆ ಅರ್ಜಿ ಸಲ್ಲಿಸುವ ಪ್ರಾರಂಭ ದಿನಾಂಕ | 25-05-2023 |
| 02 | ದಂಡ ಶುಲ್ಕವಿಲ್ಲದೆ ಪ್ರಥಮ ವರ್ಷದ ಪ್ರಥಮ ಸೆಮಿಸ್ಟರ್ ಪದವಿಗೆ ಪ್ರವೇಶ ಪಡೆಯಲು ಕಡೆಯ ದಿನಾಂಕ | 15-07-2023 |
| 03 | ರೂ. 200/-ಗಳ ದಂಡ ಶುಲ್ಕದೊಂದಿಗೆ ಪ್ರಥಮ ವರ್ಷದ ಪ್ರಥಮ ಸೆಮಿಸ್ಟರ್ ಪದವಿಗೆ ಪ್ರವೇಶ ಪಡೆಯಲು ಕಡೆಯ ದಿನಾಂಕ (ಯು.ಜಿ.ಸಿ ನಿಯಾಮವಳಿ ಹಾಗೂ ಸರ್ಕಾರದ ಪತ್ರದನ್ವಯ ನಿಗದಿಪಡಿಸಿದೆ.) | 31-07-2023 |

ಮುಂದುವರೆದು, 2023-24ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕಾದ ಶುಲ್ಕಗಳ ಪಟ್ಟಿಯನ್ನು ಆನ್‌ಲೈನ್ ಸಾಫ್ಟ್‌ವೇರ್‌ನಲ್ಲಿ ಈಗಾಗಲೇ ಅಳವಡಿಸಲಾಗಿದ್ದು, ಎಲ್ಲಾ ಸಂಯೋಜಿತ ಕಾಲೇಜಿನ ಹಾಗೂ ಘಟಕ/ನೇರ ಆಡಳಿತಕ್ಕೊಳಪಟ್ಟ ಕಾಲೇಜಿನ ಪ್ರಾಂಶುಪಾಲರುಗಳು ಸದರಿ ಶುಲ್ಕಗಳ ಪಟ್ಟಿಯನುಸಾರ ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕಾದ ಹಾಗೂ ಕಾಲೇಜಿನಲ್ಲಿ ಉಳಿಸಿಕೊಳ್ಳುವ ಶುಲ್ಕವನ್ನು ಯು.ಯು.ಸಿ.ಎಂ.ಎಸ್. ಪೋರ್ಟಲ್‌ನಲ್ಲಿ ನಮೂದಿಸತಕ್ಕದ್ದು.

ಪ್ರಸಕ್ತ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾಲಯದ ಮಾರ್ಗಸೂಚಿ, ಎನ್.ಇ.ಪಿ. ನಿಯಮಾವಳಿ, ಪ್ರವೇಶ ಶುಲ್ಕದ ಪಟ್ಟಿ ಹಾಗೂ ಸ್ನಾತಕ ಪದವಿಯ ಸೂಚನೆಗಳು ಮತ್ತು 1 ರಿಂದ 9ರವರೆಗಿನ ಅನುಬಂಧಗಳನ್ನು ವಿಶ್ವವಿದ್ಯಾಲಯದ ಅಂತರ್‌ಜಾಲದಲ್ಲಿ (www.kuvempu.ac.in) ಪ್ರಕಟಿಸಲಾಗಿದೆ. 2023-24ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಗಳ ಪ್ರವೇಶಾತಿಗೆ ಸಂಬಂಧಪಟ್ಟ ಸೂಚನೆಗಳ ಅನುಬಂಧ-1ನ್ನು ಈ ಅಧಿಸೂಚನೆಯೊಂದಿಗೆ ಲಗತ್ತಿಸಲಾಗಿದೆ.

ಸ್ನಾತಕ ಪದವಿ ಆನ್‌ಲೈನ್ ಪ್ರವೇಶಾತಿಗೆ ಸಂಬಂಧಿಸಿದಂತೆ ಯಾವುದಾದರು ಸಮಸ್ಯೆಗಳಿದ್ದಲ್ಲಿ, ಸರ್ಕಾರದಿಂದ ನಾಮನಿರ್ದೇಶನಗೊಂಡಿರುವ ಈ ಕೆಳಕಂಡ ನೋಡಲ್ ಅಧಿಕಾರಿಗಳನ್ನು ದೂರವಾಣಿ ಮುಖಾಂತರ ಸಂಪರ್ಕಿಸುವುದು.

1. **ಡಾ. ಅಶ್ಫಕ್ ಅಹ್ಮದ್ – 9845142267**
2. **ಡಾ. ರಾಜೇಶ್ವರಿ – 9480329762**
3. **ಡಾ. ಮಂಜುನಾಥ್ ಎನ್. – 8861273638**
4. **ಶ್ರೀ ಗಿರೀಶ್ ಹೆಚ್.ಟಿ. – 9449866139**
5. **ಡಾ. ಶೋಯೆಬ್ ಅಹಮದ್ – 9035089070**
6. **ಡಾ. ಗಜಾನನ ಪ್ರಭು ಬಿ. – 9845311458**
7. **ಡಾ. ಶ್ರೀಕಾಂತ್ ಕೆ.ಎನ್. – 9980377886**
8. **ಶ್ರೀ ಗೋಪಾಲ್ – 9902118181**

ಮಾನ್ಯ ಕುಲಸಚಿವರ ಅನುಮೋದನೆಯಾಗಿದೆ

ಉಪಕುಲಸಚಿವರು
ಉಪ ಕುಲಸಚಿವ
ಶೈಕ್ಷಣಿಕ ವಿಭಾಗ,
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577451

ಗೆ,

ವಿಶ್ವವಿದ್ಯಾಲಯದ ಎಲ್ಲಾ ಸಂಯೋಜಿತ ಸ್ನಾತಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಹಾಗೂ ಘಟಕ ಕಾಲೇಜುಗಳು, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಸೇರ ಆಡಳಿತಕ್ಕೊಳಪಟ್ಟ ಕಾಲೇಜು, ಶಂಕರಘಟ್ಟ.

ಪ್ರತಿಗಳು:

1. ಆಪ್ತ ಸಹಾಯಕರು, ಕುಲಪತಿಗಳು: ಕುಲಸಚಿವರು: ಕುಲಸಚಿವರು(ಪ): ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2. ಪ್ರೊ. ಅಶ್ಫಕ್ ಅಹಮದ್, ನೋಡಲ್ ಅಧಿಕಾರಿಗಳು, NEP-2020/ UUCMS, ಸ್ನಾತಕೋತ್ತರ ಭೂ ವಿಜ್ಞಾನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
3. ಕಛೇರಿ ಪ್ರತಿ.

ಕುವೆಂಪು ವಿಶ್ವವಿದ್ಯಾಲಯ ಅನುಬಂಧ-1

## ಸ್ನಾತಕ ಪದವಿ ಪ್ರವೇಶ 2023-24

ಬಿ.ಎ./ಬಿ.ಎಸ್ಸಿ./ಬಿ.ಕಾಂ./ಬಿ.ಬಿ.ಎ./ಬಿ.ಸಿ.ಎ./ಬಿ.ಎಸ್.ಡಬ್ಲ್ಯೂ/ಬಿ.ಬಿ.ಎ. (ಟೂರಿಸಂ&ಟ್ರಾವೆಲ್) ಹಾಗೂ ಇತರೆ ಸ್ನಾತಕ ಪದವಿಗಳಿಗೆ ಅನ್ವಯವಾಗುವಂತೆ ಈ ಕೆಳಕಂಡ ಸೂಚನೆಗಳನ್ನು ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲಾ ಸಂಯೋಜಿತ/ಘಟಕ/ಸ್ವಾಯತ್ತ ಹಾಗೂ ನೇರ ಆಡಳಿತಕ್ಕೊಳಪಟ್ಟ ಕಾಲೇಜುಗಳು ತಪ್ಪದೆ ಪಾಲಿಸಲು ಸೂಚಿಸಲಾಗಿದೆ.

**ಶೈಕ್ಷಣಿಕ ವೇಳಾ ಪಟ್ಟಿ : ಶುಲ್ಕ ಪಾವತಿ**

1) ಕಾಲೇಜಿನ ಪ್ರಾಂಶುಪಾಲರು / ಮುಖ್ಯಸ್ಥರು ವಿಶ್ವವಿದ್ಯಾಲಯವು ನಿಗದಿಪಡಿಸಿದ 2023-24ನೇ ಶೈಕ್ಷಣಿಕ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯನ್ನು ಅಧ್ಯಾಪಕರುಗಳ ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ಬರುವಂತೆ ಕಡ್ಡಾಯವಾಗಿ ಪ್ರಕಟಿಸಬೇಕು.
2) ಈಗಾಗಲೇ ಪರಿಚಲಿಸಲಾಗಿರುವ 2023-24ನೇ ಶೈಕ್ಷಣಿಕ ವೇಳಾಪಟ್ಟಿಗನುಗುಣವಾಗಿ ನಿಗದಿತ ಅವಧಿಯೊಳಗೆ ಎಲ್ಲಾ ತರಗತಿಗಳ ಪ್ರವೇಶಗಳನ್ನು **UUCMS** ಮಾರ್ಗಸೂಚಿಗಳನ್ವಯ ಪೂರ್ಣಗೊಳಿಸಬೇಕು.
3) ವಿಶ್ವವಿದ್ಯಾಲಯದ ನಿಯಮಗಳನುಸಾರ ಬೋಧನೆ ಹಾಗೂ ಪರೀಕ್ಷೆಗಳನ್ನು ನಡೆಸಬೇಕು.
4) ನಿಗದಿತ ಕೊನೆಯ ದಿನಾಂಕದ ನಂತರ ಪ್ರವೇಶಗಳನ್ನು ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.
5) ಪ್ರಸ್ತುತ ಜಾರಿಯಲ್ಲಿರುವ **ಎನ್.ಇ.ಪಿ.** ನಿಯಮಾವಳಿ ಪ್ರಕಾರ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸ್ನಾತಕ ಪದವಿ ಪ್ರಥಮ ಸೆಮಿಸ್ಟರ್‌ಗೆ ಆನ್‌ಲೈನ್‌ನಲ್ಲಿ ಪ್ರವೇಶವನ್ನು ಪಡೆದುಕೊಳ್ಳುವುದು. ಹೀಗೆ ವಿವಿಧ ಸ್ನಾತಕ ಪದವಿಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಯು ನಿಯಮಾನುಸಾರ **ಶೇ.75 ರಷ್ಟು ಹಾಜರಾತಿಯನ್ನು** ಹೊಂದಿರತಕ್ಕದ್ದು ಆಯಾ ಕಾಲೇಜುಗಳ ಪ್ರಾಂಶುಪಾಲರು ಈ ಬಗ್ಗೆ ನಿಗಾ ವಹಿಸಲು ಸೂಚಿಸಲಾಗಿದೆ.
6) ದ್ವಿತೀಯ/ ತೃತೀಯ ವರ್ಷದ (ತೃತೀಯ/ ಐದನೇ ಸೆಮಿಸ್ಟರ್‌ಗೆ) ವಿದ್ಯಾರ್ಥಿಗಳ ಪ್ರವೇಶಾತಿ ಪಟ್ಟಿಯನ್ನು ಆನ್‌ಲೈನ್‌ನಲ್ಲಿ ಅನುಮೋದನೆಗೆ ಸಲ್ಲಿಸುವುದು.
7) ಸ್ನಾತಕ ಪದವಿಗಳ ಪ್ರವೇಶ ಪ್ರಕ್ರಿಯೆಯ ದಿನಾಂಕ ಮುಕ್ತಾಯಗೊಂಡ ನಂತರ ಪ್ರಾಂಶುಪಾಲರುಗಳು, ವಿದ್ಯಾರ್ಥಿಗಳಿಗೆ ಶಿಫಾರಸ್ಸು ಪತ್ರವನ್ನು ನೀಡಿ ವಿಶ್ವವಿದ್ಯಾಲಯದ ಅನುಮತಿಗಾಗಿ ಕಳುಹಿಸಬಾರದು. ಈ ಹಂತದಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡಿದಲ್ಲಿ ಪಠ್ಯಕ್ರಮ ಬೋಧನೆಯಿಂದ ವಂಚಿತರಾಗುವುದಲ್ಲದೆ, ನಿಯಮಾನುಸಾರ ಶೇ.75 ರಷ್ಟು ಹಾಜರಾತಿ ಪಡೆಯಲು ಸಾಧ್ಯವಾಗುವುದಿಲ್ಲ.
8) ಎಲ್ಲಾ ಸೆಮಿಸ್ಟರ್‌ಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರವೇಶ ಪಡೆಯಲು ನಿಗದಿಪಡಿಸಿರುವ ದಿನಾಂಕದಿಂದ 15 ದಿನಗಳೊಳಗಾಗಿ ಸಂಬಂಧಪಟ್ಟ ಮೂಲ ದಾಖಲಾತಿಗಳನ್ನು ಹಾರ್ಡ್ ಮತ್ತು ಸಾಫ್ಟ್‌ಕಾಪಿಯನ್ನು **kuvempuacademic@gmail.com**ನಲ್ಲಿ ಸಲ್ಲಿಸಿ, ಅನುಮೋದನೆಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು.
9) ಪ್ರವೇಶಾತಿಯ ನಂತರ ಯಾವುದೇ ಕಾರಣಕ್ಕೆ ವಿದ್ಯಾರ್ಥಿಗಳು ಪ್ರವೇಶ ರದ್ದುಪಡಿಸಿಕೊಂಡಲ್ಲಿ ವಿಶ್ವವಿದ್ಯಾಲಯಕ್ಕೆ ಪಾವತಿಸಿರುವ ಯಾವುದೇ ಶುಲ್ಕಗಳನ್ನು ಹಿಂಪಾತಿಸಲು ಅವಕಾಶವಿರುವುದಿಲ್ಲ.
10) ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕಾಗಿರುವ ಯಾವುದೇ ಶುಲ್ಕಗಳನ್ನು ವಿದ್ಯಾರ್ಥಿಗಳೇ ನೇರವಾಗಿ ಆನ್‌ಲೈನ್ ಮೂಲಕ **"ಹಣಕಾಸು ಅಧಿಕಾರಿಗಳು ಕುವೆಂಪು ವಿಶ್ವವಿದ್ಯಾಲಯ"** ಇವರ ಪದನಾಮದಲ್ಲಿ **ಬ್ಯಾಂಕಿನ ಖಾತೆ ಸಂಖ್ಯೆ:54023036291, ಐ.ಎಫ್.ಎಸ್.ಸಿ. ಸಂಖ್ಯೆ: SBNI0040759, "ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ" ಜ್ಞಾನಸಹ್ಯಾದ್ರಿ ಶಾಖೆಗೆ** ಪಾವತಿಯಾಗುವಂತೆ ಸಂದಾಯ ಮಾಡಿ ಚಲನ್‌ನ ಒಂದು ಮೂಲ ಪ್ರತಿಯನ್ನು ಅಗತ್ಯ ದಾಖಲಾತಿಗಳೊಂದಿಗೆ ಈ ಕಛೇರಿಗೆ ಕಳುಹಿಸಲು ತಿಳಿಸಲಾಗಿದೆ.
11) ವಿಶ್ವವಿದ್ಯಾಲಯದ ಸುತ್ತೋಲೆಯಲ್ಲಿ ಸೂಚಿಸಿರುವಂತೆ ನಮೂನೆಗಳನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಲು ಮತ್ತು ಸೂಚನೆಗಳನ್ನು ಪಾಲಿಸಲು ತಿಳಿಸಲಾಗಿದೆ. ಬ್ಯಾಂಕ್ ಚಲನ್‌ಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಡೌನ್‌ಲೋಡ್ ಮಾಡಿಕೊಂಡು ಶುಲ್ಕವನ್ನು ಪಾವತಿಸುವುದು. ನಿಗದಿತ ಶುಲ್ಕ ವಿವರಗಳ ಪಟ್ಟಿಯನ್ನು ಕಡ್ಡಾಯವಾಗಿ ಸಲ್ಲಿಸುವುದು.

--2

**II) ಪ್ರವೇಶ ಮಿತಿ**

1) ನಿಗದಿತ ಕೊನೆಯ ದಿನಾಂಕದ ನಂತರ ಉಳಿದ ಸ್ಥಾನಗಳನ್ನು ಭರ್ತಿ ಮಾಡಲು **ವಿಶ್ವವಿದ್ಯಾಲಯದ ಅನುಮತಿ ಪಡೆಯಬೇಕು. ವಿಶ್ವವಿದ್ಯಾಲಯದ ಅನುಮತಿ ಇಲ್ಲದೆ ಯಾವುದೇ ಪ್ರವೇಶವನ್ನು ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.**
2) ಸ್ನಾತಕ ಪದವಿ ತರಗತಿಗಳಿಗೆ ವಿಶ್ವವಿದ್ಯಾಲಯದ ಪ್ರಚಲಿತ ನಿಯಮದನುಸಾರ ಪ್ರವೇಶಾತಿ ನೀಡಬೇಕು ಯಾವುದೇ ಕಾರಣಕ್ಕೂ ನಿಯಮವನ್ನು ಉಲ್ಲಂಘಿಸಬಾರದು ನಿಯಮಗಳನುಸಾರ ಅರ್ಹರಾದ ವಿದ್ಯಾರ್ಥಿಗಳು ಮಾತ್ರ ಪ್ರವೇಶ ಪಡೆದಿದ್ದಾರೆಂದು ದೃಢಪಡಿಸಿಕೊಳ್ಳುವ ಹೊಣೆ ಕಾಲೇಜಿನ ಪ್ರಾಂಶುಪಾಲರು /ಮುಖ್ಯಸ್ಥರದ್ದಾಗಿರುತ್ತದೆ. ಈ ಬಗ್ಗೆ ಪ್ರವೇಶಾತಿ ಪಡೆದ ಆಯಾ ವರ್ಷದ ವಿದ್ಯಾರ್ಥಿ ಪಟ್ಟಿಯ ಕೊನೆಯ ಪುಟದಲ್ಲಿ ವಿಶ್ವವಿದ್ಯಾಲಯದ ನಿಯಮಾವಳಿಯಾನುಸಾರ ಅರ್ಹತೆಯನ್ನು ಪರಿಶೀಲಿಸಿ, ಪ್ರವೇಶಾತಿ ನೀಡಿರುವ ಬಗ್ಗೆ ಪ್ರಾಂಶುಪಾಲರು ದೃಢೀಕರಿಸುವುದು.
3) ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗದಿಂದ ಪ್ರಸಕ್ತ ಸಾಲಿಗೆ ವಿಷಯವಾರು ಪ್ರವೇಶ ಮಿತಿ ಪಡೆದಿರುವ **ಸಂಯೋಜನಾ ಆದೇಶವನ್ನು** ಕಡ್ಡಾಯವಾಗಿ ಲಗತ್ತಿಸುವುದು.

**III) ಹಾಜರಾತಿ**

1) **ಯು.ಜಿ.ಸಿ. / ಎನ್.ಇ.ಪಿ.** ನಿಯಮಾನುಸಾರ **ಶೇ.75 ರಷ್ಟು ಹಾಜರಾತಿ ಕಡ್ಡಾಯವಾಗಿರುತ್ತದೆ** ಹಾಜರಾತಿ ಕಡಿಮೆ ಬಂದಲ್ಲಿ ವಿಶ್ವವಿದ್ಯಾಲಯವು ನಿಯಮಾನುಸಾರ ಕ್ರಮಕೈಗೊಳ್ಳಬಹುದೆಂಬ ಬಗ್ಗೆ ವಿದ್ಯಾರ್ಥಿಗಳಿಂದ ಮುಚ್ಚಳಿಕೆ ಬರೆಯಿಸಿಕೊಳ್ಳಬೇಕು. ಈ ಬಗ್ಗೆ ಅನುಬಂಧ–VII ರ ನಮೂನೆಯನ್ನು ಭರ್ತಿಮಾಡಿ ಕಾಲೇಜಿನಲ್ಲಿ ಇರಿಸಿಕೊಳ್ಳತಕ್ಕದ್ದು ಹಾಗೂ ವಿಶ್ವವಿದ್ಯಾಲಯ ಬಯಸಿದಾಗ ದಾಖಲೆಗಳನ್ನು ತಪ್ಪದೇ ಹಾಜರುಪಡಿಸತಕ್ಕದ್ದು.
2) ಪ್ರಾಂಶುಪಾಲರು / ಮುಖ್ಯಸ್ಥರುಗಳು ವಿಶ್ವವಿದ್ಯಾಲಯವು ನಿಗದಿಪಡಿಸಿರುವ ಪ್ರವೇಶ ಮಿತಿ ಮತ್ತು ವಿಷಯ ಸಮೂಹಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಸಂಯೋಜನೆ ಅಥವಾ ಅನುಮೋದನೆ ಪಡೆಯದ ವಿಷಯ ಸಮೂಹಗಳಿಗೆ ಪ್ರವೇಶ ನೀಡಿದಲ್ಲಿ ವಿಶ್ವವಿದ್ಯಾಲಯವು ಜವಾಬ್ದಾರಿಯಾಗುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಪ್ರವೇಶ ಅನುಮೋದನೆಯನ್ನು ತಡೆಹಿಡಿಯಲಾಗುವುದು.
3) ವಿಶ್ವವಿದ್ಯಾಲಯದ ಹಾಜರಾತಿ ನಿಯಮಗಳನುಸಾರ ಹಾಜರಾತಿ ನಿರ್ಬಂಧಗಳನ್ನು ವಿದ್ಯಾರ್ಥಿಗಳ ಗಮನಕ್ಕೆ ತಂದು ಅದನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

**IV) ಪದವಿ ಪ್ರವೇಶಾರ್ಹತೆ : ವರ್ಗಾವಣೆ ಪ್ರವೇಶ : ಮರುಪ್ರವೇಶ**

1) ಕರ್ನಾಟಕ ಸರ್ಕಾರದ ಪದವಿ ಪೂರ್ವ ಶಿಕ್ಷಣ ಮಂಡಳಿ ನಡೆಸಿದ 10+02 ಹಂತದ ಪಿ.ಯು.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವವರು ವಿಶ್ವವಿದ್ಯಾಲಯದ ಪದವಿಗಳ ಪ್ರವೇಶಾತಿಗೆ ಅರ್ಹತೆ ಹೊಂದಿರುತ್ತಾರೆ.
2) ರಾಷ್ಟ್ರೀಯ ಶಿಕ್ಷಣ ನೀತಿ 2020ರಡಿಯಲ್ಲಿ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ವರ್ಗಾವಣೆ / ಬಹು ಆಗಮನ / ಬಹು ನಿರ್ಗಮನದ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ಇಡಿ 27 ಇಜಿಒವಿ2022 ಬೆಂಗಳೂರು ದಿನಾಂಕ: 28-02-2023ರಲ್ಲಿ ಸೂಚಿಸಿರುವಂತೆ ಪಾಲಿಸತಕ್ಕದ್ದು.
3) ವಿದ್ಯಾರ್ಥಿಯು ಮೊದಲ ವರ್ಷದ ಪ್ರಾರಂಭದಲ್ಲಿ ಪದವಿ ಅಧ್ಯಯನಕ್ಕೆ ಆಯಾ ಕಾಲೇಜುಗಳಲ್ಲಿ ಲಭ್ಯವಿರುವ Discipline Core ಮತ್ತು Open Elective ಆಯ್ಕೆ ಕುರಿತು ಸರ್ಕಾರದ ಆದೇಶ ಸಂಖ್ಯೆ: ಇಡಿ 260 ಯುಎನ್ಇ 2019(ಭಾಗ–1) ಬೆಂಗಳೂರು ದಿನಾಂಕ: 15-09-2021ರ ಅನುಬಂಧ – ಅ ರಲ್ಲಿ ಸೂಚಿಸಿರುವಂತೆ ಪಾಲಿಸುವುದು.
4) ಹೊರ ರಾಜ್ಯ ಅಥವಾ ಹೊರ ದೇಶದ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಕೊಳ್ಳುವಾಗ ಅಂತಹ ವಿದ್ಯಾರ್ಥಿಗಳು ಸಂಬಂಧಪಟ್ಟ ರಾಜ್ಯದ ಪದವಿ ಪೂರ್ವ ಶಿಕ್ಷಣ ಮಂಡಳಿಯಿಂದ ಎನ್.ಓ.ಸಿ.ಯನ್ನು ಪಡೆಯತಕ್ಕದ್ದು. ಹಾಗೂ ವಿಶ್ವವಿದ್ಯಾಲಯದಿಂದ ಅರ್ಹತಾ ಪ್ರಮಾಣ ಪತ್ರವನ್ನು(Eligibility Certificate) ಪಡೆದ ನಂತರವೇ ಪ್ರವೇಶ ಮಾಡಿಕೊಳ್ಳತಕ್ಕದ್ದು ಹಾಗೂ ಹೊರರಾಜ್ಯದ ಶಿಕ್ಷಣ ಮಂಡಳಿಯಿಂದ ಪಡೆದ ಅಂಕಪಟ್ಟಿಯ ನೈಜತೆಯನ್ನು ಪರಿಶೀಲಿಸಿ ಪ್ರವೇಶ ನೀಡುವ ಪೂರ್ಣ ಜವಾಬ್ದಾರಿ ಪ್ರಾಂಶುಪಾಲರದ್ದಾಗಿರುತ್ತದೆ.
5) ವಿಶ್ವವಿದ್ಯಾಲಯದ ಸುತ್ತೋಲೆ ಸಂಖ್ಯೆ:ಕುವಿ:ಎಸಿ-5/239/2021-22, ದಿನಾಂಕ:24-09-2021 ರ ಪ್ರಕಾರ ದ್ವಿತೀಯ ಪಿ.ಯು.ಸಿ. / ಎರಡು ವರ್ಷದ ಐ.ಟಿ.ಐ. / ಮೂರು ವರ್ಷದ ಡಿಪ್ಲೋಮಾ ಶಿಕ್ಷಣ ಪೂರೈಸಿ ವಿದ್ಯಾಭ್ಯಾಸ **ಸ್ಥಗಿತಗೊಳಿಸಿದ ವಿದ್ಯಾರ್ಥಿಗಳು** ಪದವಿ ತರಗತಿಗಳಿಗೆ ಪ್ರವೇಶ ಪಡೆಯುವ ಸಂಬಂಧ ವಿದ್ಯಾರ್ಥಿಗಳ ಅರ್ಜಿಗಳನ್ನು ಪ್ರವೇಶ ಅರ್ಹತೆ ಬಗ್ಗೆ ಪ್ರಾಂಶುಪಾಲರುಗಳು ತಮ್ಮ ಹಂತದಲ್ಲೇ **ಎನ್.ಇ.ಪಿ.** ನಿಯಮಾನುಸಾರ ಕೂಲಂಕುಷವಾಗಿ ಪರಿಶೀಲಿಸಿ, ಸಂಬಂಧಪಟ್ಟ **ಅರ್ಹತಾ ಪ್ರಮಾಣ ಪತ್ರದ ಶುಲ್ಕವನ್ನು** ಪಾವತಿಸಿಕೊಂಡು ಪ್ರವೇಶಾತಿ ನೀಡಲು ತಿಳಿಸಲಾಗಿದೆ.
6) ಪ್ರವೇಶಾತಿಯ ನಂತರ ವಿದ್ಯಾರ್ಥಿಗಳು ತಮ್ಮ ವಿವಾಹ ಅಥವಾ ಪಾಲಕರ ವರ್ಗಾವಣೆ ಪ್ರಯುಕ್ತ ಅಥವಾ ಇನ್ನಿತರೆ ಅನಿವಾರ್ಯ ಕಾರಣಗಳಿಂದಾಗಿ ಕಾಲೇಜು ಬದಲಾವಣೆ ಬಯಸಿದಲ್ಲಿ ಅಂತಹ ಪ್ರಸ್ತಾವನೆಗಳನ್ನು ಅನುಬಂಧ-III ರಲ್ಲಿ ಭರ್ತಿಮಾಡಿ ವಿದ್ಯಾರ್ಥಿಗಳು ಪಡೆದಿರುವ ಹಾಜರಾತಿ ತಃಖ್ತೆಯೊಂದಿಗೆ ವಿಶ್ವವಿದ್ಯಾಲಯದ ಪೂರ್ವಾನುಮತಿಗಾಗಿ ಸಲ್ಲಿಸಬೇಕು.

7) ಒಂದು ಕಾಲೇಜಿನಿಂದ ಮತ್ತೊಂದು ಕಾಲೇಜಿಗೆ ವರ್ಗಾವಣೆ ಪ್ರವೇಶ ಪಡೆಯಲು ಪ್ರಾಂಶುಪಾಲರು ಶಿಫಾರಸ್ಸು ಮಾಡುವಾಗ ವಿದ್ಯಾರ್ಥಿಗಳು ಈ ಹಿಂದೆ ಅಭ್ಯಸಿಸಿದ ವಿಷಯಗಳು ವರ್ಗಾವಣೆಗೊಳ್ಳುವ ಕಾಲೇಜಿನಲ್ಲಿ ಲಭ್ಯವಿರುವ ಬಗ್ಗೆ ಖಚಿತಪಡಿಸಿಕೊಂಡು ಶಿಫಾರಸ್ಸು ಮಾಡತಕ್ಕದ್ದು.ಒಂದು ವೇಳೆ ವ್ಯತಿರಿಕ್ತವಾಗಿ ಶಿಫಾರಸ್ಸು ಮಾಡಿದಲ್ಲಿ ವಿದ್ಯಾರ್ಥಿಗಳಿಗಾಗುವ ತೊಂದರೆಗಳಿಗೆ ಕಾಲೇಜಿನ ಪ್ರಾಂಶುಪಾಲರೇ ಹೊಣೆಯಾಗಬೇಕಾಗುತ್ತದೆ. ಅಲ್ಲದೆ ಅಂತಹ ವಿದ್ಯಾರ್ಥಿಗಳ ಪ್ರವೇಶವನ್ನು ತಡೆಹಿಡಿಯಲಾಗುವುದು. ವರ್ಗಾವಣೆಯನ್ನು ದ್ವಿತೀಯ, ತೃತೀಯ ವರ್ಷದಲ್ಲಿ ಮಾತ್ರ ಪರಿಗಣಿಸಲು ತಿಳಿಸಲಾಗಿದೆ.

8) ಪ್ರವೇಶಾತಿಯ ನಂತರ ವಿದ್ಯಾರ್ಥಿಯು ಅನಿವಾರ್ಯ ಕಾರಣಗಳಿಂದ ವಿದ್ಯಾಭ್ಯಾಸವನ್ನು ಸ್ಥಗಿತಗೊಳಿಸಿ ಒಂದು ಅಥವಾ ಎರಡು ವರ್ಷದ ಅಂತರದ ತರುವಾಯ ಮರುಪ್ರವೇಶ ಪಡೆಯಲು ಇಚ್ಛಿಸಿದಲ್ಲಿ ಎನ್.ಇ.ಪಿ. ಜಾರಿಯಲ್ಲಿರುವುದರಿಂದ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶ ಪಡೆದು ವ್ಯಾಸಂಗ ಮುಂದುವರೆಸುವುದು. ಅದಕ್ಕೆ ಕಾರಣವೇನೆಂಬುದರ ಕುರಿತು ಸೂಕ್ತ ವಿವರಣೆಯನ್ನು ಪಡೆದು, ವಿದ್ಯಾರ್ಥಿಯು ಈ ಹಿಂದೆ ಪ್ರವೇಶ ಹೊಂದಿದ ಸ್ಕೀಂ ಮತ್ತು ಬರೆದಿರುವ ಪರೀಕ್ಷಾ ವಿವರಗಳನ್ನು ನಿಗದಿತ ನಮೂನೆಯಲ್ಲಿ ಭರ್ತಿಮಾಡಿ ಪ್ರಾಂಶುಪಾಲರ ಶಿಫಾರಸ್ಸಿನೊಂದಿಗೆ ವಿಶ್ವವಿದ್ಯಾಲಯಕ್ಕೆ ಅನುಮತಿಗಾಗಿ ಕಳುಹಿಸಬೇಕು.

9) ವರ್ಗಾವಣೆ / ಮರುಪ್ರವೇಶದ ಅರ್ಜಿಗಳಿಗೆ ಶಿಫಾರಸ್ಸು ಮಾಡುವ ಸಂದರ್ಭದಲ್ಲಿ ಭಾಷೆ : ಐಚ್ಛಿಕ ವಿಷಯಗಳ ಪೂರ್ಣ ವಿವರಣೆ ಹಾಗೂ ಪ್ರವೇಶ ಪಡೆದ ಶೈಕ್ಷಣಿಕ ವರ್ಷದ ವಿವರ ನೀಡಬೇಕು. ಇಲ್ಲದಿದ್ದಲ್ಲಿ ಶಿಫಾರಸ್ಸನ್ನು ಪರಿಗಣಿಸಲಾಗುವುದಿಲ್ಲ.(ಉದಾಹರಣೆ ಬಿ.ಕಾಂ. ಕಡ್ಡಾಯ ವಿಷಯಗಳು ಎಂದು ನಮೂದಿಸಲಾಗುತ್ತಿದ್ದು, ಇದರ ಬದಲಿಗೆ ಆಯಾ ಕಾಲೇಜುಗಳಲ್ಲಿ ಬೋಧಿಸುವ ಬಿ.ಕಾಂ. ಪದವಿಯ ಐಚ್ಛಿಕ ವಿಷಯಗಳ ಪೂರ್ಣ ವಿವರ ನೀಡುವುದು)

**V) <u>ಭಾಷೆ/ಐಚ್ಛಿಕ ವಿಷಯಗಳ ಬದಲಾವಣೆ;</u>**

1) ಭಾಷೆ / ಐಚ್ಛಿಕ ವಿಷಯಗಳ ಬದಲಾವಣೆಯ ಪ್ರಸ್ತಾವನೆಯನ್ನು ವಿಶ್ವವಿದ್ಯಾಲಯದ ವಿನಿಯಮ 11ರ ಪ್ರಕಾರ 1ನೇ /2ನೇ ಹಾಗೂ 3ನೇ ಸೆಮಿಸ್ಟರ್ ಪದವಿಯ ವಿದ್ಯಾರ್ಥಿಗಳು ನಿಗದಿತ ನಮೂನೆಯಲ್ಲಿ ಪ್ರಾಂಶುಪಾಲರ ಶಿಫಾರಸ್ಸಿನೊಂದಿಗೆ ತರಗತಿಗಳು ಪ್ರಾರಂಭವಾದ 30 ದಿನಗಳೊಳಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು. ತಡವಾಗಿ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪುರಸ್ಕರಿಸಲಾಗುವುದಿಲ್ಲ.
2) ಭಾಷೆ / ಐಚ್ಛಿಕ ವಿಷಯ ಬದಲಾವಣೆ ನಮೂನೆಯನ್ನು ಈ ಕಛೇರಿಗೆ ಕಳುಹಿಸುವಾಗ ಭಾಷೆಯ ಮತ್ತು ವಿಷಯ ಸಮೂಹದ ಸಂಕ್ಷಿಪ್ತ ವಿವರಣೆಯನ್ನು ನೀಡುವುದು.
3) ವಿಶ್ವವಿದ್ಯಾಲಯದ ಸಂಯೋಜನೆ ಪಡೆದ ಭಾಷೆಗಳನ್ನು ವಿದ್ಯಾರ್ಥಿಗಳಿಗೆ ನಿಗದಿಪಡಿಸಬೇಕು. ಸಂಯೋಜನೆಗೊಳ್ಳದ ಭಾಷೆಗೆ ವಿದ್ಯಾರ್ಥಿಗಳಿಗೆ ಅನಿವಾರ್ಯ ಕಾರಣಗಳಿಂದ ನೀಡಬೇಕಾಗಿ ಬಂದಲ್ಲಿ ವಿಶ್ವವಿದ್ಯಾಲಯದ ಪೂರ್ವಾನುಮತಿಯನ್ನು ಪಡೆಯಬೇಕು.

**VI) <u>ವಲಸೆ ಪ್ರಮಾಣ ಪತ್ರ:</u>**

ವಲಸೆ ಪ್ರಮಾಣ ಪತ್ರ ಪಡೆಯಲು ವಿದ್ಯಾರ್ಥಿಯು ಎಲ್ಲಾ ಸೆಮಿಸ್ಟರ್ / ನಾನ್‌ಸೆಮಿಸ್ಟರ್‌ಗಳ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳನ್ನು ಹಾಗೂ ಕಾಲೇಜಿನಿಂದ ಪಡೆದ ಮೂಲ **"ಬೇಬಾಕಿ ಪತ್ರ ಅಥವಾ ವರ್ಗಾವಣೆ ಪತ್ರ"** ದ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕಾಗುತ್ತದೆ. ಈ ಬಗ್ಗೆ ವಿದ್ಯಾರ್ಥಿಗಳಿಗೆ ವಲಸೆ ಪ್ರಮಾಣಪತ್ರ ಪಡೆಯಲು ಅಗತ್ಯವಿರುವ ದಾಖಲೆಗಳ ಕುರಿತು ಕಾಲೇಜಿನ ಪ್ರಕಟಣಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಲು ತಿಳಿಸಲಾಗಿದೆ.

**VII) <u>ಇತರೆ ವಿಷಯಗಳು.</u>**

1) ಸ್ನಾತಕ ಪದವಿ ಹಳೆ ವಿನಿಯಮದ ಪ್ರಕಾರ 05ನೇ ಸೆಮಿಸ್ಟರ್ ಪ್ರವೇಶಕ್ಕೆ 01, 02, 03 ಮತ್ತು 04ನೇ ಸೆಮಿಸ್ಟರ್‌ಗಳ ಒಟ್ಟು ವಿಷಯಗಳಲ್ಲಿ 40% ರಷ್ಟು ವಿಷಯಗಳಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಿರಬೇಕು. ಮೇಲ್ಕಂಡಂತೆ ಅರ್ಹತೆಯನ್ನು ಖಚಿತಪಡಿಸಿಕೊಂಡು 05ನೇ ಸೆಮಿಸ್ಟರ್‌ಗೆ ಪ್ರವೇಶಾತಿ ನೀಡುವುದು. ಹಾಗೂ ಪ್ರವೇಶಾತಿ ಪಡೆದ 01, 03 ಮತ್ತು 05ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳ ಪ್ರವೇಶಾತಿ ಪಟ್ಟಿಯ ಕೊನೆಯ ಪುಟದಲ್ಲಿ ಕಾಲೇಜಿನ ಪ್ರಾಂಶುಪಾಲರು ಈ ಕೆಳಕಂಡಂತೆ ದೃಢೀಕರಣವನ್ನು ನಮೂದಿಸತಕ್ಕದ್ದು.

**<u>ದೃಢೀಕರಣ</u>**

**" ಮೇಲ್ಕಂಡ ________ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಅಧಿಸೂಚನೆಯನ್ವಯ ಸೆಮಿಸ್ಟರ್ ಸ್ಕೀಂ ನ ವಿನಿಯಮದ ಪ್ರಕಾರ -----ನೇ ಸೆಮಿಸ್ಟರ್‌ಗೆ ಪ್ರವೇಶವನ್ನು ಹೊಂದಲು ಅರ್ಹತೆ ಹೊಂದಿರುತ್ತಾರೆಂದು ದೃಢೀಕರಿಸಲಾಗಿದೆ" ಎಂದು ದೃಢೀಕರಣವನ್ನು ಹಾಕಿ ಸಹಿ ಮಾಡಬೇಕು.**

2) ಸ್ನಾತಕ ಪದವಿಗಳ ಪ್ರವೇಶಾತಿ ಕುರಿತು ಉಲ್ಲೇಖ(1)ರ ಎನ್.ಇ.ಪಿ ವಿನಿಯಮ ಮಾರ್ಗಸೂಚಿದಲ್ಲಿನ ಕಲಂ(4)ರನ್ವಯ "Candidates may complete both the under graduate and the post graduate programs on a slow track. They may pursue the three years or eight semester programs in 4 to 5years (8 to 10 semesters) and four years or eight semester programs in 5 to 6years (10to 12semesters) as a result, higher education institutions have to admit candidates not only for programs but also for the subjects or courses but the new admissions are generally made at the beginning of an academic year or the beginning of the odd semesters" ಕ್ರಮಕೈಗೊಳ್ಳಲು ತಿಳಿಸಲಾಗಿದೆ.

3) ಬಿ.ಎಸ್.ಡಬ್ಲ್ಯೂ ಪದವಿಯ 05ನೇ ಸೆಮಿಸ್ಟರ್ ಪದವಿಗೆ ಪ್ರವೇಶವನ್ನು ಹೊಂದಲು ವಿನಿಯಮದನ್ವಯ ಕ್ರಮ ಕೈಗೊಳ್ಳುವುದು.

4) ಸ್ನಾತಕ ಪದವಿ ಪ್ರವೇಶಾತಿ ಸಂದರ್ಭದಲ್ಲಿ ಮೀಸಲಾತಿ ಕುರಿತು ಸರ್ಕಾರದ ಆದೇಶ ಸಂಖ್ಯೆ: ಇಡಿ 46 ವಿವಿಧ 2023 ಬೆಂಗಳೂರು ದಿನಾಂಕ: 11-04-2023ರಲ್ಲಿ ಸೂಚಿಸಿರುವಂತೆ ಮೀಸಲಾತಿ ಮಾರ್ಗಸೂಚಿಗಳನ್ನು ಎಲ್ಲಾ ಸಂಯೋಜಿತ ಕಾಲೇಜಿನ ಹಾಗೂ ಘಟಕ/ನೇರ ಆಡಳಿತಕ್ಕೊಳಪಟ್ಟ ಕಾಲೇಜಿನ ಪ್ರಾಂಶುಪಾಲರುಗಳು ಪಾಲಿಸತಕ್ಕದ್ದು.

5) ಪ್ರವೇಶಾನುಮೋದನೆಗಾಗಿ ಸಂಬಂಧಪಟ್ಟ ಕಾಲೇಜಿನವರು ಪ್ರತಿ ವಿದ್ಯಾರ್ಥಿಯ ಹೆಸರು ಮತ್ತು ಐಚ್ಛಿಕ ಮತ್ತು ಭಾಷ ವಿಷಯ, ವಿವಿಧ ಶುಲ್ಕಗಳ ವಿವರಗಳನ್ನು ನಿಗದಿತ ನಮೂನೆಯಲ್ಲಿ ಭರ್ತಿಮಾಡಿ ತ್ರಿಪ್ರತಿಗಳಲ್ಲಿ ಪ್ರವೇಶ ಪ್ರಕ್ರಿಯೆ ಮುಗಿದ **15** ದಿನಗೊಳಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು. ಸದರಿ ವಿವರಗಳನ್ನೊಳಗೊಂಡ ಪಟ್ಟಿಯನ್ನು ಸಿದ್ಧಪಡಿಸಿ ಕಳುಹಿಸುವುದು ಕಾಲೇಜಿನ ಪ್ರಾಂಶುಪಾಲರ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ. ಮೂಲ ಅಂಕಪಟ್ಟಿಗಳು ಇಲ್ಲದೆ ಇದ್ದಲ್ಲಿ ಪ್ರವೇಶಾನುಮೋದನಾ ಪಟ್ಟಿಯನ್ನು ಸ್ವೀಕರಿಸಲಾಗುವುದಿಲ್ಲ. ಪ್ರತಿಯೊಂದು ಐಚ್ಛಿಕ ವಿಷಯ ಗುಚ್ಛಕ್ಕೆ ಕನಿಷ್ಠ 10 ವಿದ್ಯಾರ್ಥಿಗಳಿಗೆ ಕಡಿಮೆ ಇಲ್ಲದಂತೆ ಪ್ರವೇಶ ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಅಂತಹ ಪ್ರವೇಶಗಳನ್ನು ಅನುಮೊದಿಸಲಾಗುವುದಿಲ್ಲ.

6) ಪ್ರವೇಶಾನುಮೋದನಾ ಪಟ್ಟಿ ಹಾಗೂ ಇತರೆ ದಾಖಲಾತಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವಾಗ ಕೂಲಂಕುಷವಾಗಿ ಪರಿಶೀಲಿಸಿ, ತಿದ್ದುಪಡಿಗಳು ಇಲ್ಲದಂತೆ ನಿಗಾ ವಹಿಸುವುದು. ಅಲ್ಲದೆ ತಮ್ಮ ಪತ್ರಗಳಲ್ಲಿ **ಕಣ್ತಪ್ಪಿನಿಂದಾಗಿ** ಎಂಬ ಪದವನ್ನು ಬಳಸಿ ತಿದ್ದುಪಡಿಗಾಗಿ ಅವಕಾಶವನ್ನು ಕೋರಿದಲ್ಲಿ ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

7) ಯಾವುದೇ ಪದವಿಗಳ ಪ್ರವೇಶಕ್ಕೆ ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಪ್ರಾಂಶುಪಾಲರು ಪ್ರವೇಶಾತಿಗಾಗಿ ಶಿಫಾರಸ್ಸು ಪತ್ರವನ್ನು ಈ ಕಛೇರಿಗೆ ಕಳುಹಿಸಬಾರದೆಂದು ಕಟ್ಟುನಿಟ್ಟಾಗಿ ಸೂಚಿಸಿದೆ.

8) ಈ ಸೂತ್ತೋಲೆಯೊಂದಿಗೆ ಲಗತ್ತಿಸಿರುವ, ಅನುಬಂಧ – 05 ಮತ್ತು 06ರ ಮಾದರಿ ನಮೂನೆಗಳಲ್ಲಿ ವಿದ್ಯಾರ್ಥಿಗಳ ಅಂಕಿ ಅಂಶಗಳ ವಿವರವನ್ನು ತಪ್ಪದೇ ಸಲ್ಲಿಸಬೇಕು.

9) **ನಿಗದಿತ ನಮೂನೆಗಳಲ್ಲಿ ಕ್ರಮಬದ್ದವಾಗಿ ಪ್ರವೇಶಾನುಮೋದನಾ ಪಟ್ಟಿಯನ್ನು ತರಗತಿವಾರು / ಕೋರ್ಸ್‌ವಾರು (ಬಿ.ಎ. : ಬಿ.ಎಸ್ಸಿ : ಬಿ.ಕಾಂ. : ಬಿ.ಬಿ.ಎ. : ಬಿ.ಸಿ.ಎ. : ಬಿ.ಎಸ್.ಡಬ್ಲ್ಯೂ ಹಾಗೂ ಬಿ.ಬಿ.ಎ. (ಟೂರಿಸಂ & ಟ್ರಾವೆಲ್) ಪ್ರತ್ಯೇಕವಾಗಿ ತಯಾರಿಸಿ ತ್ರಿಪ್ರತಿಯಲ್ಲಿ ಅನುಮೋದನೆಗಾಗಿ ಸಲ್ಲಿಸುವುದು.**

10) **ಅನುಬಂಧ – 08ರಲ್ಲಿ ಪ್ರಥಮ ವರ್ಷದ ಪ್ರತಿ ವಿದ್ಯಾರ್ಥಿಯ ಆನ್‌ಲೈನ್ ಶುಲ್ಕ ಪಾವತಿಸಿದ ಮೂಲ ರಶೀದಿಯೊಂದಿಗೆ ಪ್ರವೇಶಾತಿ ಪಟ್ಟಿಯನ್ನು ಸಲ್ಲಿಸುವುದು.**

11) ಅನುಬಂಧ – 08 (ಎ) ರಲ್ಲಿ ದ್ವಿತೀಯ ವರ್ಷದ : ತೃತೀಯ ವರ್ಷದ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಶುಲ್ಕ ವಿವರಗಳನ್ನು ಪ್ರತ್ಯೇಕವಾಗಿ ಸಲ್ಲಿಸಬೇಕು(ಒಟ್ಟು ಮೊಬಲಗನ್ನು ಒಂದೇ ಚಲನ್‌ನಲ್ಲಿ ಪಾವತಿಸುವುದು).

12) ವಿಶ್ವವಿದ್ಯಾಲಯವು ನಿಗದಿಗೊಳಿಸಿದ ಎಲ್ಲಾ ಶುಲ್ಕಗಳನ್ನು ವಿದ್ಯಾರ್ಥಿಗಳಿಂದ ಕಡ್ಡಾಯವಾಗಿ ಪಾವತಿಸಿಕೊಂಡು ನಂತರದಲ್ಲಿ ಶುಲ್ಕ ವಿನಾಯಿತಿಗೆ ಅರ್ಹತೆಹೊಂದಿದ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿಯಡಿ ಮಂಜೂರು ಮಾಡಿದ ಶುಲ್ಕಗಳನ್ನು ಆಯಾ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ಜಮಾ ಆಗುವಂತೆ ಎಲ್ಲಾ ಪ್ರಾಂಶುಪಾಲರುಗಳು ಅಗತ್ಯ ಕ್ರಮಕೈಗೊಳ್ಳತಕ್ಕದ್ದು.

13) ವಿಶ್ವವಿದ್ಯಾಲಯದಿಂದ ಅರ್ಹತಾ ಪ್ರಮಾಣ ಪತ್ರ, ಮರುಪ್ರವೇಶ, ಕಾಲೇಜು ಬದಲಾವಣೆ, ಐಚ್ಛಿಕ ವಿಷಯ ಬದಲಾವಣೆ ಮತ್ತು ಭಾಷಾ ವಿಷಯ ಬದಲಾವಣೆ ಪಡೆದ ಪ್ರತಿ ವಿದ್ಯಾರ್ಥಿಗಳ ಅನುಮತಿ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸುವುದು.

ಮಾನ್ಯ ಕುಲಸಚಿವರ ಅನುಮೋದನೆಯಾಗಿದೆ

ಉಪಕುಲಸಚಿವರು

ಉಪ ಕುಲಸಚಿವ
ಶೈಕ್ಷಣಿಕ ವಿಭಾಗ,
ಕುವೆಂಪು ವಿಶ್ವವಿದ್ಯಾನಿಲಯ
ಸಹ್ಯಾದ್ರಿ, ಶಂಕರಘಟ್ಟ-577451
ಶಿವಮೊಗ್ಗ ಜಿಲ್ಲೆ

24/5/23

24/5/2023